ಲಕ್ಷಣಗಳು ಗೋಚರಿಸಿದ್ದವು. ಶಂಕರ ಹೆಂಡತಿಗೆ ಇನ್ನಿಲ್ಲದಂತೆ ಆರೈಕೆ ಮಾಡಿದ್ದ. ಬಯಕೆಯ ಬುತ್ತಿಗಳು ಎಲ್ಲೆಲ್ಲಿಂದಲೂ ಬಂದಿದ್ದವು. ಅಜ್ಜಿ ಆನಂದದಿಂದ ಕಂದನ ದಾರಿ ನೋಡುತ್ತಿದ್ದಳು. ನನಗೂ ಸುದ್ದಿ ಗೊತ್ತಾದಾಗ ಇರಿಸುಮುರಿಸಾಗಿತ್ತು. ತಕ್ಷಣ ಮನ 'ಅವನಾದರೂ ಸುಖವಾಗಿರಲಿ' ಎಂದು ಹಾರೈಸಿತ್ತು. ಆದರೆ, ವಿಧಿಗೆ ಅದು ಒಪ್ಪಿತವಾಗಲಿಲ್ಲ. ಹೆರಿಗೆಯಲ್ಲಿ ತಾಯಿ – ಮಗು ಇಬ್ಬರನ್ನೂ ಕಳೆದುಕೊಂಡು ಶಂಕರ ಭ್ರಮಾಧೀನನಾದ. ಸಂಸಾರದಲ್ಲಿ ಆಸಕ್ತಿಯನ್ನೇ ಕಳೆದುಕೊಂಡ. ಯಾರೆಷ್ಟೇ ಒತ್ತಾಯಿಸಿದರೂ ಮತ್ತೆ ಮದುವೆಯಾಗಲಿಲ್ಲ. ಅಜ್ಜಿ ತಳಮಳಿಸಿದರೂ ಕೇಳದೇ ಒಂಟಿಯಾಗುಳಿದುಬಿಟ್ಟ. ಆಗ ನನಗೂ ದುಃಖವಾಗಿತ್ತು. ಸಂತೈಸುವ ಆಸೆಯಿದ್ದರೂ ಅಂತರ ಬಹಳವಾಗಿತ್ತು. ಅವನು ಎದುರಿಗೆ ಬಂದರೂ ಕತ್ತೆತ್ತಿ ನೋಡದೇ ಹೋಗಿಬಿಡುತ್ತಿದ್ದ. ನಾನು ತಲೆ ತಗ್ಗಿಸಿ ಸರಿದುಹೋಗುತ್ತಿದ್ದೆ. ಒಟ್ಟಾರೆ ಮೂವರ ಬದುಕೂ ಪಲ್ಲಟವಾಗಿತ್ತು. ಸುಖ, ಸಂತಸದ ಮುಂದೆ ದೊಡ್ಡ ಕಂದಕವನ್ನು ಸೃಷ್ಟಿಸಿ ದಡದಾಚೆ ಮೂವರನ್ನೂ ನಿಲ್ಲಿಸಿ ಆಟ ನೋಡುತ್ತಿತ್ತು ಬದುಕು.

'ಅಕ್ಕ ಸತ್ತರ ಅಮಾಶಿ ನಿಲ್ಲೂದಿಲ್ಲ' ಎನ್ನುವಂತೆ ಯಾವ ಕಾರ್ಯಗಳೂ ನಿಲ್ಲಲಿಲ್ಲ. ದೊಡ್ಡಣ್ಣನ ಮಕ್ಕಳು ಬೆಂಗಳೂರಿನಲ್ಲಿ ರಮಾ ವೈನಿಯ ಅಕ್ಕನ ಮನೆಯಲ್ಲಿ ಬೆಳೆಯುತ್ತಿದ್ದರು. ದೊಡ್ಡವ ಶ್ರೀವತ್ಸ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡ. ಎರಡನೇಯವ ಶ್ರೀಕರ ಅವಕಾಶ ಗಿಟ್ಟಿಸಿಕೊಂಡು ಅಮೆರಿಕಕ್ಕೆ ಹಾರಿದ. ಮಕ್ಕಳ ಅಭಿವೃದ್ಧಿ ಕಂಡು ಸಂತೋಷವಾದರೂ ಎದೆ ಮೂಲೆಯಲ್ಲೆಲ್ಲೋ ಅಗಲುವಿಕೆಯ ನೋವು. ಮಗಳು ಜಾಹ್ನವಿ ಓದಲು ಬೆಳಗಾವಿಯಲ್ಲಿ ಅಜ್ಜಿಯ ಮನೆಯಲ್ಲಿದ್ದಳು. ಅವರೆಲ್ಲರ ಮದುವೆ... ಮುಂದಿನ ಕಾರ್ಯಗಳೆಲ್ಲ ಸುಗಮವಾಗಿ ನಡೆದವು. ಎಲ್ಲಕ್ಕೂ ನಾನು ಸೆರಗು ಕಟ್ಟಿದ್ದೆ. ಕೆಲಸ, ಕಾರ್ಯಗಳಲ್ಲಿ ಮುಳುಗಿ ನನ್ನನ್ನೇ ಮರೆಯಬೇಕೆಂಬ ಹುಚ್ಚಿನಿಂದ ದುಡಿಯುತ್ತಿದ್ದೆ. ಜನ ಸೇರಿದಲ್ಲಿ ಹೋಗುವುದನ್ನು ಕಡಿಮೆ ಮಾಡಿದ್ದೆ. ನೋಡಿ ದೊಡ್ಡಣ್ಣನ ಕಣ್ಣುಗಳು ಆಗಾಗ ಆರ್ದ್ರಗೊಳ್ಳುತ್ತಿದ್ದವು. ಅವ್ವನಂತೂ ನನ್ನನ್ನು ನೋಡಿ ಕಣ್ಣೊರೆಸಿಕೊಳ್ಳದ ದಿನವೇ ಇರಲಿಲ್ಲ. ನನ್ನ ಬಾಳು ಹಾಳಾದ ನೋವು ಅವಳನ್ನು ಶೂಲದಂತೆ ತಿವಿಯುತ್ತಿತ್ತು. ಅಪ್ಪ ನೊಂದಿದ್ದರೂ ತೋರಿಸಿಕೊಳ್ಳದೇ ಇನ್ನೂ ದೇಶಪಾಂಡೆತನದ ಗತ್ತಿನಲ್ಲಿದ್ದ. ಆದರೆ, ಅವ್ವ ತುಂಬಾ ಸೋತು ಹೋಗಿದ್ದಳು. ಬಿ.ಪಿ., ಆಸ್ತಮಾ ಸೇರಿಕೊಂಡಿದ್ದವು. ವಯಸ್ಸೂ ಎಪ್ಪತ್ತು ದಾಟಿತ್ತು. ಆಗಾಗ ಜ್ವರ, ನಿಶ್ಯಕ್ತಿ ಕಾಡಿಸುತ್ತಿತ್ತು. ನನಗೋಸ್ಕರ ಕಂಡ ಕಂಡ ದೇವರಿಗೆ ಹರಕೆ ಹೊತ್ತಿದ್ದಳು. ಯಾವ ದೇವರಿಗೂ ನನ್ನ ಮೇಲೆ ಕರುಣೆ ಬಂದಿರಲಿಲ್ಲ.

ಜಾಹ್ನವಿಯ ಮಂಗಳಗೌರಿ ಪೂಜೆಗೆ ಮನೆಯವರೆಲ್ಲ ಅವಳ ಅತ್ತೆಮನೆಗೆ ಹೋಗಿದ್ದರು. ರಮಾವೈನಿ ಮತ್ತು ಅಣ್ಣ ಒತ್ತಾಯಿಸಿದ್ದರೂ ಅವ್ವನ ನೆವ ಮಾಡಿ ನಾನು ಮನೆಯಲ್ಲೇ ಉಳಿದಿದ್ದೆ. ಅಂದು ಅಪ್ಪ, ಅವ್ವ ಮನಸ್ಸು ಬಿಚ್ಚಿ ಎಷ್ಟೊತ್ತಿನವರೆಗೂ ನನ್ನ ಜೊತೆ ಮಾತನಾಡಿದ್ದರು. ಅವ್ವನಿಗೆ ಸ್ವಲ್ಪ ಜ್ವರವಿದ್ದುದರಿಂದ ಅವಳ ಬಳಿಯಲ್ಲೇ ಮಲಗಿದ್ದೆ. ರಾತ್ರಿ ಯಾವಾಗಲೋ ಜ್ವರ ಏರಿತ್ತು. ಅವ್ವ, "ರುಕ್ಕೀ, ಆ ಮೂಲಿಮನಿ ಶಂಕರ ನಿನ್ನ ಹಿಂದ ಬಿದ್ದಿದ್ನಂತಲ್ಲ?" ಎಂದಳು. ಬೆಚ್ಚಿ, "ನಿನಗ ಯಾರು ಹೇಳಿದ್ರವ್ವಾ?" ಎಂದು ಕೇಳಿದ್ದೆ. "ಹಿಂಗ... ಒಂದ್ಸಲಾ ಮಂಚಿ ಹೇಳಿದ್ಲು. 'ಎಲ್ಲರೆ ದೂರ ಹೋಗಿ ಮದವಿ ಮಾಡಕೊಂಡು ಇರೋಣು' ಅಂದ್ನಂತ..." ಎಂದಳು. "ಹೌದು..." ಎಂದು ನಿಡುಸುಯ್ದೆ. "ಖರೆ... ಖರೆ ಕೇಳಿದ್ರ ಹೋಗಿಬಿಡಬೇಕಾಗಿತ್ತು. ಎಂಥಾ ಜಾತಿ... ಗೀತಿ? ಕುಂಡಲಿ... ಪಂಡಲಿ ಎಲ್ಲಾ ನೋಡಿ ಮಾಡಿದ್ದ ನಿನ್ನ ಮದವಿ ಕಥಿ ಏನಾತು ನೋಡಿದಿಲ್ಲೋ?" ಎಂದು ನಿಟ್ಟುಸಿರಿಟ್ಟಳು. "ಅವ್ವಾ!..." ಎಂದು ಹೆಚ್ಚುಕಡಿಮೆ ಚೀರಿದ್ದೆ. "ಏನ ಮಾತಾಡ್ಲಿಕ್ಕತ್ತಿ? ಅಪ್ಪನ ಗತಿ ಏನಾಗ್ತಿತ್ತು? ಮನಿತನದ ಅಬ್ರು ಹೋಗ್ತಿತ್ತು. ಮುಂದ ಮನಿಗೆ ಶಾಪ ಇದ್ದಂಗ... ಮುಂದಿನ ಮಕ್ಕಳ ಮದವಿ ಗಿದವಿ ಎಲ್ಲಾ ತ್ರಾಸಾಗ್ತಿತ್ತು" ಎಂದು ಏದುಸಿರು ಬಿಡುತ್ತಲೇ ಹೇಳಿದ್ದೆ.